## ಡಬ್ಬಿಂಗೇ ಡಾರ್ಲಿಂಗ್ ಆದರೆ...

ರಘುನಾಥ ಚ.ಹ. ಮತ್ತು ರಾಘವೇಂದ್ರ ಕೆ. ಬರೆದಿರುವ ಜೂನ್ 4ರ ಸಂಚಿಕೆಯ ಮುಖಪುಟ ಲೇಖನ 'ಬದಲಾಗಲಿದೆಯೇ ಮನೆಮನೆ ಕಥೆ', ಕನ್ನಡ ಕಿರುತೆರೆಯ ಭವಿಷ್ಯದ ಸಮಸ್ಯೆ, ಸವಾಲುಗಳ ವಿಶ್ಲೇಷಣೆಯನ್ನು ಚೆನ್ನಾಗಿ ಮಾಡಿದೆ. ಡಬ್ಬಿಂಗ್ ಧಾರಾವಾಹಿಗಳು ಹೆಚ್ಚು ಜನಪ್ರಿಯತೆ ಗಳಿಸಬಲ್ಲ ಸಂಭವ ನಿಜಕ್ಕೂ ಆತಂಕದ ವಿಷಯವೇ. ಹಾಗೆಯೇ ಕಿರುಚಿತ್ರ ಪುಟದಲ್ಲಿ ಗೌರಿಯವರು ಮಾಡುವ ಕಿರುಚಿತ್ರ ವಿಮರ್ಶೆ ನನಗೆ ಯಾವಾಗಲೂ ಇಷ್ಟವಾಗುತ್ತದೆ. ಈ ಸಲವೂ 'ಟಿಂಡಿ' ಚಿತ್ರದ ವಿಮರ್ಶೆ ಚಿತ್ರದಷ್ಟೇ ನವಿರಾಗಿ ಮನಕ್ಕೆ ತಟ್ಟುತ್ತದೆ. 'ತಪ್ಪಿಗೂ ಇರಲಿ ಅವಕಾಶ' ಸ್ವಯಂಪ್ರಭಾ ಅವರ ಕಿರು ಲೇಖನವೂ ಈಗಿನ ಅವಶ್ಯಕತೆಯೇ ಆಗಿದೆ. ಧಾರಾವಾಹಿ 'ಅಜ್ಞಾತ' ಸದ್ಯಕ್ಕಂತೂ ಹೆಚ್ಚಿನ ಆಸಕ್ತಿಯನ್ನು ಉಂಟುಮಾಡುತ್ತಿಲ್ಲ. ಆದರೂ ಸುಧಾ ಕಾಯ್ದು ಓದುವ ಪತ್ರಿಕೆ.

—ವಿದ್ಯಾ ಶಿರಹಟ್ಟಿ, ಧಾರವಾಡ



ಕೊರೊನಾ ಎಂಬ ಸಾಂಕ್ರಾಮಿಕ ಜಾಡ್ಯದಿಂದ ಆರ್ಥಿಕ ವ್ಯವಸ್ಥೆಯಲ್ಲಿ ಸಾಕಷ್ಟು ಏರುಪೇರಾದವು. ಕಿರುತೆರೆ ಹಾಗೂ ಹಿರಿತೆರೆ ಸಹಾ ಕೊರೊನಾ ಹೊಡೆತಕ್ಕೆ ನಲುಗಿದೆ. ಕೊರೊನಾ ವ್ಯಾಧಿಯ ಹಾನಿ ಬೀರುವ ದೂರಗಾಮಿ ಪರಿಣಾಮಗಳೇ ಅಧಿಕ. ಉದಾ: ಪ್ರಪಂಚದ ಆರ್ಥಿಕ ವ್ಯವಸ್ಥೆಯನ್ನು ತನ್ನ ಡಾಲರ್ ಸಾರ್ವಭೌಮತ್ವದ ಮೂಲಕ ನಿಯಂತ್ರಿಸುವ ಅಮೆರಿಕ ದೊಡ್ಡಣ್ಣನ ಸ್ಥಾನವನ್ನು ಇಷ್ಟು ದಿನ ಅಬಾಧಿತವಾಗಿ ಹೊಂದಿತ್ತು. ಹೀಗಾಗಿ ಬೆಳೆಯುತ್ತಿರುವ ಆರ್ಥಿಕ ದೇಶಗಳಲ್ಲಿ ಬೇರೆ ಸಮಯದಲ್ಲಿ ಆಗುತ್ತಿದ್ದಕ್ಕಿಂತ ಹೆಚ್ಚಿನ ನಷ್ಟ ಈ ಬಾರಿ ಆಗುತ್ತಿದೆ. ಇದು ಜಗತ್ತಿನಲ್ಲಿ ಕಂಡುಬರುತ್ತಿರುವ ವಾಸ್ತವಿಕ ಸತ್ಯ. ಅದನ್ನು ನಾವೆಲ್ಲರೂ ಅರಗಿಸಿಕೊಳ್ಳಲೇಬೇಕಾಗಿದೆ.

—ಬಾಣಾವರ ಮಂಜುನಾಥ್, ಬೆಂಗಳೂರು

## ಅವರವರ ಭಾವಕ್ಕೆ...

ಜೂನ್ 4ರ ಸಂಚಿಕೆಯಲ್ಲಿ ಪ್ರಕಟವಾದ ನನ್ನ ನೆಚ್ಚಿನ ಲೇಖಕಿ ಸಿ.ಎನ್. ಮುಕ್ತಾ ಅವರ ಸಣ್ಣ ಕಥೆ 'ಅವರವರ ಭಾವಕ್ಕೆ' ಬಹಳ ಇಷ್ಟವಾಯ್ತು.



ಬಹಳ ದಿನಗಳ ನಂತರ ಒಳ್ಳೆಯ ಕಥೆ ಓದಿದ ಹಾಗಾಯ್ತು

—ಸವಿತಾ ಕೆ.ಎಸ್.

ಸಿ. ಎನ್. ಮುಕ್ತಾ ಅವರ ಕಥೆ ಚೆನ್ನಾಗಿದೆ, ಆದರೆ ಕಥೆಯ ಪ್ರಾರಂಭದಲ್ಲಿ ಮೈಸೂರಿಗೆ ಹೊರಟ ರೈಲು ಕಥೆಯ ಕೊನೆಯಲ್ಲಿ ಬೆಂಗಳೂರಿಗೆ ತಲುಪಿದ್ದು ಹೇಗೆ?

—ಎಚ್. ವಿ. ಶ್ರೀಕಾಂತನ್, ಬೆಂಗಳೂರು

## ವೇಣು 75



ಜೂನ್ 4ರ ಸಂಚಿಕೆಯಲ್ಲಿ ಮಹತಿ ಬರೆದ 'ಬಿ.ಎಲ್. ವೇಣು 75' ಲೇಖನ ಓದಿದೆ. ದುರ್ಗದ ಇತಿಹಾಸವನ್ನು ಎಳೆ ಎಳೆಯಾಗಿ ಕರ್ನಾಟಕದ ಜನತೆಗೆ ಉಣಬಡಿಸಿದ ಇಬ್ಬರು ಮಹನೀಯರೆಂದರೆ ತ.ರಾ.ಸು. ಮತ್ತು ಬಿ.ಎಲ್. ವೇಣು. ವೇಣು ಅವರು ಬರೆದ 'ಮದಕರಿನಾಯಕ' ಕಾದಂಬರಿ ಸಿನಿಮಾ ಆಗುತ್ತಿರುವುದು ನಮ್ಮ ಜಿಲ್ಲೆಯ ಎಲ್ಲರಿಗೂ ಹೆಮ್ಮೆಯ ವಿಷಯ. ಶುಭವಾಗಲಿ ವೇಣು ಅವರಿಗೆ. ಕೋಟೆ ನಾಡು ಮತ್ತಷ್ಟು ಪ್ರಜ್ವಲಿಸಲಿ.

—ಬಾಹುಬಲಿಸ್ವಾಮಿ. ಎಸ್.,
ಎಂ. ಮೃತ್ಯುಂಜಯಪ್ಪ, ಚಿತ್ರದುರ್ಗ

ಈ ಬರಹ ನಮ್ಮನ್ನು ವಿದ್ಯಾರ್ಥಿ ಜೀವನದ ಸಮಯಕ್ಕೆ ಕರೆದುಕೊಂಡು ಹೋಯಿತು. ಆಗಿನ ಕಾಲದಲ್ಲಿ ಪ್ರಕಟವಾಗುತ್ತಿದ್ದ 'ಪ್ರಜಾಮತ' ವಾರಪತ್ರಿಕೆಯಲ್ಲಿ 'ಪ್ರೇಮಪರ್ವ' ಅವರ ಧಾರಾವಾಹಿ ಸಂಚಿಕೆಗಳನ್ನು ಬಿಡದೇ ಓದುತ್ತಿದ್ದೆವು. ಈ ಕಥೆ ಸಿನಿಮಾ ಆದಾಗ ನಾವೆಲ್ಲ ಕುತೂಹಲದಿಂದ ಮೊದಲನೇ ವಾರವೇ ನೋಡಿ ಧಾರಾವಾಹಿ ಹಾಗೂ ಸಿನಿಮಾದ ಬಗ್ಗೆ ವಿಮರ್ಶೆ ಮಾಡಿದ ನೆನಪು ಬಂದಿತು. ಮಹತಿಯವರು ವೇಣು ಅವರನ್ನು ಮತ್ತೊಮ್ಮೆ ನೆನಪಿಸಿದ್ದಾರೆ. ವೇಣು ಅವರಿಗೆ ಜನ್ಮದಿನದ ಶುಭಾಶಯಗಳು. ಅವರು ಸಾಹಿತ್ಯ ಹಾಗೂ ಸಿನಿಮಾ ಕ್ಷೇತ್ರಗಳಲ್ಲಿ ಮತ್ತಷ್ಟು ಸೇವೆ ಮಾಡುವ ಚೈತನ್ಯ ದೇವರು ಅವರಿಗೆ ಕರುಣಿಸಲಿ.

—ಎಚ್. ಎಸ್. ರಾಘವೇಂದ್ರ, ಬೆಂಗಳೂರು

'ವೇಣು ಎಪ್ಪತ್ತೈದು' ಲೇಖನ ಸೊಗಸಾಗಿದೆ. ವೇಣು ಅವರ ಬರವಣಿಗೆಯಂತೆಯೇ ಅವರ ವ್ಯಕ್ತಿತ್ವ ಕೂಡಾ ವರ್ಣರಂಜಿತವಾದುದು. ಎಂಬತ್ತರ ದಶಕದಲ್ಲಿ ನಾನು ವೇಣು ಅವರ ಆತ್ಮೀಯ ಬಳಗದಲ್ಲಿದ್ದೆ. ಆಗ ಅವರು ಹಾಡುವುದರ ಜೊತೆಗೆ ತುಂಬಾ ಮಧುರವಾಗಿ ಕೊಳಲನ್ನು ನುಡಿಸುತ್ತಿದ್ದುದನ್ನು ಕೇಳಿ ಆನಂದಿಸಿದ್ದೆ. ವೇಣು ಅಪಾರ ಜನಮನ್ನಣೆ ಪಡೆದ ದೈತ್ಯಪ್ರತಿಭೆ.

—ವೈ. ಬಿ.ಎಚ್. ಜಯದೇವ್,ಬೆಂಗಳೂರು

## ಆದಿತ್ಯ ಹೃದಯ

ಜೂನ್ 4ರ ಸಂಚಿಕೆಯಲ್ಲಿ ಗುರುರಾಜ್ ಎಸ್. ದಾವಣಗೆರೆ ಅವರು ಬರೆದಿರುವ 'ಆದಿತ್ಯ ಹೃದಯ ಅರಿಯಲೊಬ್ಬ ಆದಿತ್ಯ' ಸೂರ್ಯನ ಕುರಿತಾದ ಅಧ್ಯಯನಾತ್ಮಕ ಲೇಖನ ಚೆನ್ನಾಗಿದೆ. ಈ ರೀತಿಯ ಅಧ್ಯಯನಾತ್ಮಕ ಲೇಖನಗಳು ಇನ್ನಷ್ಟು ಪ್ರಕಟಗೊಳ್ಳಲಿ.

—ಗೋಪಾಲಕೃಷ್ಣ ಬಿ.ಎಸ್., ಬೀರಕಟ್ಟೆ

## ವ್ಯತ್ಯಾಸ ಇಷ್ಟೇ!

ಜೂನ್ 4ರ ಸಂಚಿಕೆಯಲ್ಲಿ ಜಿ. ಬಾಲಕೃಷ್ಣ ಬರೆದಿರುವ 'ಫ್ಲೂ ನೋವಿಗೆ ನಗುವಿನ ಮುಲಾಮು' ಲೇಖನ ಸಾಂದರ್ಭಿಕವಾಗಿತ್ತು.

'ಹೌ ಟು ಗೆಟ್ ಎ ಸೀಟ್' ಎಂಬ ವ್ಯಂಗ್ಯಚಿತ್ರದಲ್ಲಿ ಆಗಿನ ಕಾಲದ ಹಾಗೂ ಹಿಂದಿನ ಕಾಲದ ಪ್ರಯಾಣಿಕರಲ್ಲಿ ಕಂಡುಬರುವ ವ್ಯತ್ಯಾಸವಿಷ್ಟೆ, ಅಂದಿನ ಪ್ರಯಾಣಿಕರ ಕೈಯಲ್ಲಿರುವ ದಿನಪತ್ರಿಕೆಗಳ ಜಾಗಕ್ಕೆ ಇಂದು ಮೊಬೈಲ್‌ಗಳು ಆಕ್ರಮಿಸಿಕೊಂಡಿವೆ.ಅದರಲ್ಲೂ ಡಾನ್ ಜ್ವಾನ್ ಪ್ರತಿರೂಪ ಎಂಬ ಚಿತ್ರ ಹಾಗೂ ಲೇಖನದ ಕೊನೆಯಲ್ಲಿ ಇರುವ ವಾಕ್ಯ ಹಿಡಿಸಿತು.

– ಸುಬ್ರಹ್ಮಣ್ಯ ಕಲ್ಲೂರ, ಬೆಂಗಳೂರು

## ಕೊರೊನಾ- ಬದುಕು

ಜೂನ್ 4ರ ಸಂಚಿಕೆಯಲ್ಲಿನ 'ವಿಚಾರಲಹರಿ'ಯ 'ಕೊರೊನಾ ಬದುಕು' ಲೇಖನ ಓದುತ್ತಿದ್ದಂತೆ, ಈ ವಿಷಕ್ರಿಮಿ ತಾನೇ ಹುಟ್ಟಿತೋ ಅಥವಾ ಹುಟ್ಟಿಸಿದರೋ, ಒಟ್ಟಿನಲ್ಲಿ ಅದು ತಂದೊಡ್ಡಿದ ಸಂಕಟವನ್ನು ಮೆಟ್ಟಿ ನಿಲ್ಲುವುದೇ ದೊಡ್ಡ ಸವಾಲಾಗಿದೆ ಎಂಬುದು ಮನವರಿಕೆ ಆಯಿತು. ಸಮಸ್ಯೆಯನ್ನು ಎಳೆ, ಎಳೆಯಾಗಿ ಅದರ ನೈಜತೆಯನ್ನು ಬಿಚ್ಚಿಟ್ಟಿದ್ದಾರೆ.

—ಅನಸೂಯ ತ್ರಿವಿಕ್ರಮ್, ಕೇದಿಗೆಮನೆ

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in